ಶ್ರೀಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿರತಕ್ಕಂಥ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಈಗಾಗಲೇ ಸಂಬಂಧಪಟ್ಟ ಸಚಿವರಿಗೆ ಈ ವಿಷಯವನ್ನು ಗಮನಕ್ಕೆ ತರಬೇಕೆಂದು ಹೇಳಿ ಕಳುಹಿಸಿಕೊಟ್ಟಿದ್ದೇನೆ. ಅವರು ಗಮನ ಸೆಳೆದಿರುವಂಥ ವಿಷಯಕ್ಕೆ ನಾಳೆ ಸದನದಲ್ಲಿ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು : ಸಿ.ಟಿ. ರವಿಯವರೇ ತಾವು ಪ್ರಸ್ತಾಪ ಮಾಡಬಹುದು.

ಶ್ರೀ ಸಿ.ಟಿ. ರವಿ: ನಾನು ಕೇಳಿದಂಥ ವಿಷಯಕ್ಕೆ ಸರ್ಕಾರದಿಂದ ಉತ್ತರ ಬಂದಿದೆ.

ಅಧ್ಯಕ್ಷರು : ಸರ್ಕಾರದಿಂದ ಉತ್ತರ ಬಂದಿದ್ದರೆ ಸರಿ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ್ (ಹುಕ್ಕೇರಿ): ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಿಡ್ಕಲ್ ಜಲಾಶಯದ ರುಸ್ತುಮಪುರ ಏತ ನೀರಾವರಿ ಯೋಜನೆ 1996ರಿಂದ ಇವತ್ತಿನವರೆಗೆ ಅಂದರೆ ಕಳೆದ 10 ವರ್ಷಗಳಿಂದ ಸುಮಾರು 6 ಕೋಟಿ 75 ಲಕ್ಷ ರೂಪಾಯಿಗಳನ್ನು ಸರ್ಕಾರ ವೆಚ್ಚ ಮಾಡಿದರೂ ಅದು ಇನ್ನೂ ಕಾರ್ಯಾರಂಭವಾಗಿಲ್ಲ. ಈಗಾಗಲೇ ಕೆನಲ್‌ನಲ್ಲಿ 90 ಪರ್ಸೆಂಟ್ motor fix ಮಾಡುವಂಥ ಎಲ್ಲ ಕೆಲಸ ನಡೆದಿದ್ದರೂ ಸಹಿತ ಅಧಿಕಾರಿಗಳ ನಿರ್ಲಕ್ಷತನದಿಂದ ಅಲ್ಲಿ ಪಂಪು ವರ್ಕ್ ಆಗುತ್ತಿಲ್ಲ. ಕಳೆದ 8–10 ವರ್ಷಗಳಲ್ಲಿ ರೈತರು ಅಲ್ಲಿ ಬೆಳೆ ಬೆಳೆದಿದ್ದರೆ ಸುಮಾರು 10–15 ಕೋಟಿ ರೂಪಾಯಿಗಳಷ್ಟು ಉತ್ಪಾದನೆಯನ್ನು ಮಾಡಬಹುದಾಗಿತ್ತು. ಇದು ಅಲ್ಲಿ ತಪ್ಪಿಹೋದ ಕಾರಣ ಕಳೆದ 6 ತಿಂಗಳಿನಿಂದ ಸತತವಾಗಿ ಅಲ್ಲಿರತಕ್ಕಂಥ ಎಲ್ಲಾ ಅಧಿಕಾರಿಗಳಿಗೆ ಈ ಪಂಪನ್ನು ತ್ವರಿತವಾಗಿ ಚಾಲೂ ಮಾಡಿ ಎಂದು ಹೇಳಿದಾಗ ಇಲ್ಲಿಯವರೆಗೆ ಚಾಲೂ ಮಾಡಿಲ್ಲ. ನಾಳೆ ಒಂದನೇ ತಾರೀಖಿನಿಂದ ನಾನು ಅಲ್ಲಿ ಧರಣಿ ಉಪವಾಸ ಸತ್ಯಾಗ್ರಹವನ್ನು ಮಾಡಬೇಕೆನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇನೆ. ಆ ಕಾರಣದಿಂದ ವಿಳಂಬಕ್ಕೆ ಕಾರಣರಾಗಿರತಕ್ಕಂಥ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ನನ್ನ ಈ ಪ್ರಶ್ನೆಗೆ ಇವತ್ತು ಈ ಸದನದ ಮೂಲಕ ಸರ್ಕಾರ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ರೈತ ಸಂಘದ ಹೋರಾಟದ ಮೂಲಕ ಬಂದಂಥವರು. ಆದ್ದರಿಂದ ತಾವು ನಾಳೆ ಪುನಃ ಧರಣಿ ಸತ್ಯಾಗ್ರಹ ಮಾಡುತ್ತೇನೆಂದು ಹೇಳುತ್ತಿದ್ದೀರಿ.

ನಿಮ್ಮ ಈ ಪ್ರಶ್ನೆಗೆ ಬಹಳ ಸಕಾರಾತ್ಮಕವಾಗಿ ಉತ್ತರ ಕೊಡತಕ್ಕಂಥದ್ದಿರುವುದರಿಂದ ದಯವಿಟ್ಟು ತಾವು ರೈತ ಸಂಘದ ಹಳೆ ಅಭ್ಯಾಸದ ಪ್ರಕಾರ ಸತ್ಯಾಗ್ರಹ ಪ್ರಾರಂಭ ಮಾಡದಿರಿ... ನಾಳೆಯೇ ನಿಮಗೆ ಸರಿಯಾದಂಥ ಉತ್ತರವನ್ನು ನಾನು ಕೊಡಿಸುತ್ತೇನೆ.

ಶ್ರೀ ಕೆ.ರಘುಪತಿ ಭಟ್ (ಉಡುಪಿ): ಮಾನ್ಯ ಅಧ್ಯಕ್ಷರೆ, ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸಸ್ಯಾಹಾರ ಸಾಮಾಗ್ರಿಗಳ ಪೂರೈಕೆ ಬಗ್ಗೆ ಗಮನ ಸೆಳೆಯಲಿಕ್ಕೆ ಇಚ್ಛೆಪಡುತ್ತೇನೆ. ನನಗೆ ಈಗ ಲಭ್ಯವಾಗಿರುವ ಮಾಹಿತಿ ಪ್ರಕಾರ ಸರ್ಕಾರ ಆಸ್ಪತ್ರೆಗಳಿಗೆ ಬೇಕಾದಷ್ಟು ಸಸ್ಯಾಹಾರವನ್ನು ಕೊಡುತ್ತಿದೆ. ಇದು ನನಗೆ ಗೊತ್ತಿರಲಿಲ್ಲ. ಅಲ್ಲಿ ಎಲ್ಲರಿಗೂ ಉಡುಪಿ ಜಿಲ್ಲೆಯ ಆಸ್ಪತ್ರೆಯ... ಪ್ರಾಯಶಃ ನಮ್ಮ ರೋಗಿಗಳು ಮತ್ತೊಮ್ಮೆ ರೋಗಿಗಳು ಆಗಲಿಕ್ಕಿಲ್ಲ. ಸಸ್ಯಾಹಾರ ತೆಗೆದುಕೊಂಡೇ ಗುಣ ಆಗಬಹುದು. ಸರ್ಕಾರ ಅಷ್ಟು ಹಣವನ್ನು ಅದಕ್ಕೆ ಖರ್ಚು ಮಾಡುತ್ತಿದೆ. ಆದರೆ ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಇದು ಯಾವುದೂ ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಟೆಂಡರ್ ವಹಿಸಿಕೊಂಡಂಥವರು ರೋಗಿಗಳಿಗೆ ಇವೆಲ್ಲ ಆಹಾರವನ್ನು ಸರಿಯಾಗಿ ಕೊಡುತ್ತಿಲ್ಲ. ಮೊಟ್ಟೆ, ಬಾಳೆಹಣ್ಣು, ಹಾಲು, ಬಾರ್ಲಿ, ಬ್ರೆಡ್ ಇವೆಲ್ಲವನ್ನು ಕೊಡುತ್ತಿದ್ದಾರೆ. ಆದರೆ ನಮ್ಮ ಉಡುಪಿ ಜಿಲ್ಲಾಸ್ಪತ್ರೆಗೆ ಹೋಗಿ ಇದನ್ನು ಪರೀಕ್ಷೆ ಮಾಡಿದೆವು. ಅಲ್ಲಿ ಕೊಡುತ್ತಿಲ್ಲ. ನಮ್ಮ ಕೆಲವು ಶಾಸಕರ ಜೊತೆ ಈ ಬಗ್ಗೆ ಕೇಳಿದಾಗ ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲಿ ಇದರ ಸಮಸ್ಯೆ ಸಾಮಾನ್ಯವಾಗಿ ಇದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಮಾನ್ಯ ಆರೋಗ್ಯ ಸಚಿವರು ಬಹಳ ಸ್ಫೂರ್ತಿಯಿಂದ ಕೆಲಸ ಮಾಡುವವರಾಗಿರುವುದರಿಂದ ಇದರ ಕಡೆಗೆ ಗಮನ ಕೊಟ್ಟು, ಸರ್ಕಾರ ಇಷ್ಟು ಕೊಡುವಂಥದ್ದು ರೋಗಿಗಳಿಗೆ ಮುಟ್ಟುತ್ತಿಲ್ಲ. ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನೊಂದು ವಿಷಯದ ಬಗ್ಗೆ ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. ಉಡುಪಿ ಜಿಲ್ಲಾಸ್ಪತ್ರೆಯಲ್ಲಿ ಕಳೆದ 20–25 ವರ್ಷಗಳಿಂದ ಒಬ್ಬರೇ ಇದಕ್ಕೆ ಟೆಂಡರ್ ಹಾಕಿಕೊಳ್ಳುತ್ತಿದ್ದಾರೆ. ಲಕ್ಷಗಟ್ಟಲೆ ಹಣ draw ಮಾಡಿಕೊಳ್ಳುವಂಥದ್ದು, ಅಂದರೆ ಈ ಸಲದ ಟೆಂಡರ್ ಅನ್ನು ಗಂಡ–ಹೆಂಡತಿ, ತಂದೆ ಈ ಮೂರು ಜನರ ಹೆಸರಿನಲ್ಲಿಯೇ ಹಾಕಿಕೊಂಡು ಹೊರಗಿನವರಿಗೆ ಗೊತ್ತಾಗದ ಹಾಗೆ ಒಂದೇ ಕುಟುಂಬದ ವ್ಯಕ್ತಿ ಜಾಸ್ತಿ ಹಣವನ್ನು ಮಾಡಿ ರೋಗಿಗಳಿಗೆ ಪೂರೈಕೆ ಮಾಡುತ್ತಿಲ್ಲ. ಅದರ ಸಲುವಾಗಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಸಂಬಂಧಪಟ್ಟ ನಿರ್ದೇಶಕರಿಗೆ ಪತ್ರವನ್ನು ಬರೆದಿದ್ದಾರೆ. ಜಿಲ್ಲಾಧಿಕಾರಿಗಳು ಸಹ ಪತ್ರ ಬರೆದಿದ್ದಾರೆ. ನಮ್ಮ ಜಿಲ್ಲಾ ಸರ್ಜನ್ ರವರು ಈ